# ಶೇ. 100 ಫಲಿತಾಂಶ

**ಬೀದರ್:** ಹೈದರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಇಲ್ಲಿನ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯಕ್ಕೆ ಕಳೆದ ಜುಲೈನಲ್ಲಿ ನಡೆದ 2 ನೇ ಮತ್ತು 4 ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಶೇ. 100 ರಷ್ಟು ಫಲಿತಾಂಶ ಬಂದಿದೆ.

ಅಂತಿಮ ವರ್ಷದ ಪರೀಕ್ಷೆಯಲ್ಲಿ ಜಗನ್ನಾಥ ಶಾಮರಾವ್ ಶೇ. 89 ರಷ್ಟು ಅಂಕಗಳೊಂದಿಗೆ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಸುಷ್ಮಾ ನರಸಿಂಗರಾವ್ ಶೇ.88, ಶಿವಕುಮಾರ ಅಶೋಕ ಅವರು ಶೇ. 87.5 ರಷ್ಟು ಅಂಕಗಳೊಂದಿಗೆ ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಎಚ್‌ಕೆಇ ಸಂಸ್ಥೆಯ ಅಧ್ಯಕ್ಷ ಡಾ. ಭೀಮಾಶಂಕರ ಬಿಲಗುಂದಿ, ಆಡಳಿತ ಮಂಡಳಿ ಸದಸ್ಯ ಹಾಗೂ ಕಾಲೇಜು ಅಭಿವೃದ್ಧಿ ಮಂಡಳಿ ಸಂಚಾಲಕ ಡಾ. ರಜನೀಶ ವಾಲಿ, ಕಾಲೇಜಿನ ಪ್ರಾಚಾರ್ಯರು, ಪ್ರಾಧ್ಯಾಪಕರು ಮತ್ತು ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

CamScanner

# ‘ಧನಾತ್ಮಕ ಚಿಂತನೆಯತ್ತ ಗಮನ ಹರಿಸಿ’

ಬೀದರ: ವಿದ್ಯಾರ್ಥಿಗಳು ತಮ್ಮಿಂದ ಏನೂ ಆಗದು ಎಂಬ ನಕರಾತ್ಮಕ ಭಾವನೆಯಿಂದ ಹೊರ ಬಂದು ಧನಾತ್ಮಕ ಚಿಂತನೆಯತ್ತ ಗಮನ ಹರಿಸಬೇಕು ಎಂದು ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಜ್ಯೋತಿರ್ಮಯಾನಂದ ಸ್ವಾಮಿ ಸಲಹೆ ನೀಡಿದರು.

ಹೈ-ಕ ಶಿಕ್ಷಣ ಸಂಸ್ಥೆಯ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡ ಬಿಇಡಿ 4ನೇ ಸೆಮಿಸ್ಟರ್‌ನ ಪ್ರಶಿಕ್ಷಣಾರ್ಥಿಗಳ ಎರಡು ದಿನಗಳ ಪೌರತ್ವ ಶಿಬಿರ ಉದ್ಘಾಟಿಸಿ ಮಾತನಾಡಿ ಯುವಕರು ಶಿಕ್ಷಣದೊಂದಿಗೆ ಸಂಸ್ಕಾರ ಹೊಂದುವುದು ಬಹಳ ಮುಖ್ಯವಾಗಿದೆ ಎಂದರು.

ಗುವಿವಿ ಸಿಂಡಿಕೇಟ್ ಸದಸ್ಯೆ ಪ್ರತಿಭಾ ಚಾಮಾ ಮಾತನಾಡಿ ಶಿಕ್ಷಕರ ಮೇಲೆ ಸಮಾಜ ನಿರ್ಮಿಸುವ ಮಹತ್ವದ ಜವಾಬ್ದಾರಿ ಇದೆ ಎಂದು ನುಡಿದರು.

ಪ್ರಾಚಾರ್ಯ ಡಾ.ಮಲ್ಲಿಕಾರ್ಜುನ ಕನಕಟ್ಟೆ ಅಧ್ಯಕ್ಷತೆ ವಹಿಸಿದ್ದರು. ಶಿಬಿರದ ನಿರ್ದೇಶಕ ಪ್ರೊ. ಸಂತೋಷಕುಮಾರ ಸಜ್ಜನ ಪ್ರಾಸ್ತಾವಿಕ ಮಾತನಾಡಿದರು. ಪ್ರೊ.ಸವೀತಾ ಜಲಾದೆ, ಪ್ರೊ.ಶಿಲ್ಪಾ ಹಿಪ್ಪರಗಿ, ಪ್ರೊ. ರಾಜಕುಮಾರ ಶಿಂದೆ, ಪ್ರೊ. ವೈಜಿನಾಥ ಬಿರಾದರ, ಪ್ರೊ.ಕವಿತಾ ಹಿರೇಮಠ, ಪ್ರೊ.ಶಿವಕುಮಾರ ಭೈರೆ, ಅಶೋಕ, ಹಣಮಂತ, ಪುಷ್ಪಾವತಿ, ರೇವಣಪ್ಪಾ ಇದ್ದರು. ಪ್ರಿಯಾಂಕಾ ಮಹಾದೇವ ಪ್ರಾರ್ಥಿಸಿದರು. ಪ್ರೊ.ಕವಿತಾ ಹಿರೇಮಠ ಸ್ವಾಗತಿಸಿದರು. ಮಾಣಿಕರಾವ ಪಾಟೀಲ್ ಹಾಗೂ ಗಂಗಮ್ಮಾ ಸ್ವಾಮಿ ನಿರೂಪಿಸಿದರು.



ಬೀದರ್‌ನಲ್ಲಿ ಹಮ್ಮಿಕೊಂಡ ಎರಡು ದಿನಗಳ ಪೌರತ್ವ ಶಿಬಿರ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಜ್ಯೋತಿರ್ಮಯಾನಂದ ಸ್ವಾಮಿ ಉದ್ಘಾಟಿಸಿದರು.

CamScanner

ಕದಂಬ ಕನ್ನಡ ಸಂಘದಿಂದ ನಮ್ಮ ಮಹಾವಿದ್ಯಾಲಯದಲ್ಲಿ ಜರುಗಿದ ಕಾರ್ಯಕ್ರಮ (ವಿಜಯ ಕರ್ನಾಟಕ) 08-11-17

www.mobilevk.com | www.vijaykarnataka.com | www.vijaykarnatakaepaper.com | www.app

ಲಕ್ಷ ವಸೂಲಿ ...ಧನ

ಕಲಬುರಗಿ : ಮೀಟರ್ ಬಡ್ಡಿ ನಡೆಸುತ್ತಿದ್ದ ಶ್ರೀಕಾಂತ ಒಂಟಿ, ಮೀನಾಕ್ಷಿ, ನಾಗರಾಜ ಕಲಶೆಟ್ಟಿ ಅವರಿಂದ 9 ಲಕ್ಷ ವಶ, ಮೂವರ ಬಂಧನ

# 'ಕನ್ನಡ ಭಾವನಾತ್ಮಕ ಬೆಸೆಯುವ ಭಾಷೆ'

## ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ

▪ ವಿಕಸುದ್ದಿಲೋಕ ಬೀದರ್

ಕನ್ನಡ ಎಂದರೆ ಕೇವಲ ಭಾಷೆಯಲ್ಲ, ಇದು ಭಾವನಾತ್ಮಕ ಮತ್ತು ಸಾಂಸ್ಕೃತಿಕವಾಗಿ ಬೆಸೆಯುವ ಮೂಲ ಬೇರಾಗಿದೆ. ಆದ್ದರಿಂದಲೇ ವಿಧೇಶಗಳಲ್ಲಿ ನೆಲೆಸಿರುವ ಕನ್ನಡಿಗರು ಕನ್ನಡ ಸಂಘಗಳ ಮೂಲಕ ಸಂಘಟಿತರಾಗಿದ್ದಾರೆ ಎಂದು ಕಸಾಪ ನಿಟಕಪೂರ್ವ ಅಧ್ಯಕ್ಷ ಪ್ರೊ. ಸಿದ್ರಾಮಪ್ಪಾ ಮಾಸಿಮಡೆ ತಿಳಿಸಿದರು.

ಕದಂಬ ಕನ್ನಡ ಸಂಘದ ವತಿಯಿಂದ ನಗರದ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬುಧವಾರ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ, ಸಾಹಿತ್ಯ ಇಲ್ಲದ ದೇಶದಲ್ಲಿ ಮಾನವೀಯ ಚಿಂತನೆ ಹೆಚ್ಚಾಗುತ್ತಿದೆ. ಆದ್ದರಿಂದ ಸಾಹಿತ್ಯ ಅಧ್ಯಯನ ನಿರಂತರವಾಗಿ ನಡೆಯಬೇಕಾಗಿದೆ ಎಂದು ಹೇಳಿದರು.

ವಿಶೇಷ ಉಪನ್ಯಾಸ ನೀಡಿದ ಹಿರಿಯ ಸಾಹಿತಿ ಚಂದ್ರಪ್ಪಾ ಹೆಬ್ಬಾಳಕರ್ ಜನಸಾಮಾನ್ಯರ ಅನುಭವದ ಕಡಿಯೇ ಜಾನಪದ ಸಾಹಿತ್ಯ. ಜೋಗಳು ಪದದಿಂದ ...ಕದ ಹಾಡಿನ ವರೆಗೆ ಜೀವನದ ಪ್ರತಿಯೊಂದು ಹಂತದಲ್ಲಿ ಜಾನಪದ ಹಾಸು ಹೊಕ್ಕಿದೆ.

ಇದನ್ನು ಆಧುನಿಕ ಬದುಕಿನಲ್ಲಿ ಉಳಿಸಿ ...ಸಬೇಕು ಎಂದರು.

ಕರ್ನಾಟಕ ಏಕೀಕರಣದ ಇತಿಹಾಸ ವಿಷಯ ...ಕು ವಿಶೇಷ ಉಪನ್ಯಾಸ ನೀಡಿದ ಕದಂಬ ಕನ್ನಡ ...ದ ಅಧ್ಯಕ್ಷ ಪ್ರೊ. ವೀರಶೆಟ್ಟಿ ಮೈಲೂರಕರ್ ...ತ್ರ್ಯದ ಪೂರ್ವದಲ್ಲಿ ಐದು ಸಂಸ್ಥಾನಗಳಲ್ಲಿ ಹರಿದು ಹಂಚಿ ಹೋಗಿದ್ದ ಕನ್ನಡಿಗರನ್ನು ಕನ್ನಡ ಭಾಷೆ ಮತ್ತು ಸಂಸ್ಕೃತಿಯೆ ಒಂದು ಮಾಡಿತ್ತು ಎಂದು ತಿಳಿಸಿದರು.

ಮಹಾವಿದ್ಯಾಲಯದ ಪ್ರಾಂಶುಪಾಲ ಪ್ರೊ. ಸಂತೋಷಕುಮಾರ ಸಜ್ಜನ ಅಧ್ಯಕ್ಷತೆ ವಹಿಸಿದ್ದರು.

ಹಿರಯ ಕಲಾವಿದ ಶಂಭುಲಿಂಗ ವಾಲ್ದೊಡ್ಡಿ, ಪ್ರಾಧ್ಯಾಪಕರಾದ ರಾಜಕುಮಾರ ಸಿಂಧೆ, ಧನರಾಜ ಭವರೆ, ಡಾ. ಉಮಾ... ದೇವರ ಮನಿ, ಡಾ. ಮಲ್ಲಿಕಾರ್ಜುನ ಕನಕಟ್ಟೆ, ಹಿಪ್ಪರಗಿ, ಉಮಾಕಾಂತ ಮೀಸೆ ಮತ್ತಿ... ಇದ್ದರು. ಪ್ರಿಯದರ್ಶಿನಿ ನಿರೂಪಿಸಿದರು. ಪ್ರಾ... ವೀಣಾ ಜಲಾದೆ ಸ್ವಾಗತಿಸಿದರು. ಸಂಘದ ... ಕಾರ್ಯದರ್ಶಿ ಪ್ರೊ. ಗಂಗಶೆಟ್ಟಿ ಖಾನಾ... ವಂದಿಸಿದರು.




ಬೀದರ್ ಬಸವೇಶ್ವರ ಮಹಾವಿದ್ಯಾಲಯದಲ್ಲಿ ಬುಧವಾರ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಕಸಾಪ ನಿಕಟಪೂ... ಜಿಲ್ಲಾಧ್ಯಕ್ಷ ಪ್ರೊ. ಸಿದ್ರಾಮಪ್ಪಾ ಮಾಸಿಮಡೆ ಮಾತನಾಡಿದರು. ಹಿರಿಯ ಸಾಹಿತಿ ಚಂದ್ರಪ್ಪಾ ಹೆಬ್ಬಾಳಕರ್, ಶಂಭುಲಿಂಗ ವಾಲ್ದೊಡ್ಡಿ, ಪ್ರಾಚಾರ್ಯ ಪ್ರೊ. ಸಂತೋಷಕುಮಾರ ಸಜ್ಜನ ಇದ್ದರು.

CS CamScanner

# ಪರಿಸರ ರಕ್ಷಣೆ ಮೂಲಭೂತ ಹೊಣೆ

## ವಿಶ್ವ ಪರಿಸರ ದಿನಾಚರಣೆ | ಪ್ಲಾಸ್ಟಿಕ್ ನಿರ್ಮೂಲನೆ ಆಂದೋಲನ ಕಾರ್ಯಕ್ರಮ

■ ವಿಜಯವಾಣಿ ಸುದ್ದಿಜಾಲ ಬೀದರ್

ನಮ್ಮ ಮೂಲಭೂತ ಅವಶ್ಯಕತೆ ಪೂರೈಸಿಕೊಳ್ಳುವಂತೆ ಪರಿಸರ ಸಹ ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದೆ. ಅದನ್ನು ಸಂರಕ್ಷಿಸಿ ಪೋಷಿಸಬೇಕು ಎಂದು ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಚಂದ್ರಶೇಖರ ರೆಡ್ಡಿ ಹೇಳಿದರು.

ನಗರದ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮಂಗಳವಾರ ಏರ್ಪಡಿಸಿದ ವಿಶ್ವ ಪರಿಸರ ದಿನಾಚರಣೆ ಹಾಗೂ ಪ್ಲಾಸ್ಟಿಕ್ ನಿರ್ಮೂಲನೆ ಆಂದೋಲನ ಉದ್ಘಾಟಿಸಿದ ಅವರು, ಪರಿಸರ ನಮ್ಮ ಜೀವನದ ಒಂದು ಭಾಗವಾಗಬೇಕು. ಪರಿಸರ ಸಂರಕ್ಷಣೆಯೂ ನಮ್ಮ ಜೀವನದ ಮೂಲ ಘನ ಉದ್ದೇಶಗಳಲ್ಲಿ ಒಂದಾಗಬೇಕು. ಅಂದಾಗಲೇ ಪರಿಸರ ರಕ್ಷಣೆ ಸಾಧ್ಯ ಎಂದರು.

ಈ ಹಿಂದೆ ಗಿಡ-ಮರ, ಸಸ್ಯಗಳನ್ನು ದೇವರೆಂದು ಪೂಜಿಸಿ ಪರಿಸರ ರಕ್ಷಣೆ ಮಾಡುತ್ತಿದ್ದರು. ಏನೋ ದೊಡ್ಡ ಸಾಧನೆ ಮಾಡಿದ್ದೇವೆ ಎಂದು ಕೆಲವರು ಪ್ಲಾಸ್ಟಿಕ್ ತಯಾರಿಸಿದ್ದರು. ಆದರೆ ಇಂದು ಅದು ವಿಷವಾಗಿದ್ದರಿಂದ ನಿಷೇಧಿಸಲಾಗಿದೆ. ಪರಿಸರ ಹಾಗೂ ಶರೀರಕ್ಕೆ ಮಾರಕವಾಗುವ ವಸ್ತು ಅಥವಾ ಚಟಗಳನ್ನು ಬಿಡಬೇಕು. ನಾವು ಆತ್ಮಸಾಕ್ಷಿಯಾಗಿ ಗಿಡ ನೆಡುತ್ತೇವೆ ಎಂದು ಪ್ರಮಾಣ ಮಾಡಿ ಇನ್ನೊಬ್ಬರಿಗೆ ಪರಿಸರ ಜಾಗೃತಿ ಬಗ್ಗೆ ತಿಳಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶರಾದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಆರ್.ರಾಘವೇಂದ್ರ ಮಾತನಾಡಿ, ಸಂವಿಧಾನದ 351(ಎ) ಪ್ರಕಾರ ಪರಿಸರ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯ. ಇತ್ತೀಚಿನ ಸಂಶೋಧನೆ ಪ್ರಕಾರ ನೂರಕ್ಕೆ ಕೇವಲ ಐದೇ ಜನ ಪರಿಸರ ಸಂರಕ್ಷಣೆಯಲ್ಲಿ ತೊಡಗಿದ್ದಾರೆ ಎಂಬ ಆಘಾತಕಾರಿ ವಿಷಯ ಹೊರಬಿದ್ದಿದೆ. ಹೀಗಾಗಿ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ ಎಂದರು.

ಜಿಲ್ಲಾ ವಿಜ್ಞಾನ ಸಮಿತಿ ಕಾರ್ಯದರ್ಶಿ ದಾನಿ ಬಾಬುರಾವ ಮಾತನಾಡಿದರು. ಪ್ರಾಚಾರ್ಯ ಡಾ.ಮಲ್ಲಿಕಾರ್ಜುನ ಕನಕಟ್ಟೆ ಅಧ್ಯಕ್ಷತೆ ವಹಿಸಿದ್ದರು. ಕುಟುಂಬ ಕಲ್ಯಾಣ ಸಮಿತಿ ಸದಸ್ಯ ಬಿ.ಎಸ್. ಪಾಟೀಲ್, ವಕೀಲ ಧನರಾಜ ಬಿರಾದಾರ, ಅರಣ್ಯಾಧಿಕಾರಿ ಅಬ್ದುಲ್ ಜಮೀರ್ ಶಂಕ್ರೆಪ್ಪ ಜನಕಟ್ಟಿ ಇತರರಿದ್ದರು. ಶಿಲ್ಪಾ ಹಿಪ್ಪರಗಿ ಸ್ವಾಗತಿಸಿದರು. ವೀಣಾ ಜಲಾದಿ ನಿರೂಪಣೆ ಮಾಡಿದರು. ಸಂಗಮೇಶ ವಂದಿಸಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಿಜ್ಞಾನ ಸಮಿತಿ ಮತ್ತು ಜಿಲ್ಲಾ ವಕೀಲರ ಸಂಘದಿಂದ ಕಾರ್ಯಕ್ರಮ ಸಂಘಟಿಸಲಾಗಿತ್ತು.



ವಿಜಯವಾಣಿ ಚಿತ್ರ

ಬೀದರ್‌ನ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಮಂಗಳವಾರ ಏರ್ಪಡಿಸಿದ ವಿಶ್ವ ಪರಿಸರ ದಿನ ಕಾರ್ಯಕ್ರಮದಲ್ಲಿ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಚಂದ್ರಶೇಖರ ರೆಡ್ಡಿ ಸಸಿ ನೆಟ್ಟು ನೀರು ಹಾಕಿದರು.

CamScanner

ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ ಬೀದರ
ಜಿಲ್ಲಾ ವಿಜ್ಞಾನ ಸಮಿತಿ, ಜಿಲ್ಲಾ ವಕೀಲರ ಸಂಘ ಬೀದರ
ಇವರ ಸಂಯುಕ್ತಾಶ್ರಯದಲ್ಲಿ

# ವಿಶ್ವ ಪರಿಸರ ದಿನಾಚರಣೆ ಮತ್ತು ಪ್ಲಾಸ್ಟೀಕ್ ನಿರ್ಮೂಲನ ಆಂದೋಲನ ಕಾರ್ಯಕ್ರಮ

ಸ್ಥಳ: ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ, ಬೀದರ
ದಿನಾಂಕ: 24-07-2018 ಸಮಯ: ಬೆಳಗ್ಗೆ 09:00 ಗಂಟೆಗೆ

| | | |
|---|---|---|
| ಉದ್ಘಾಟಕರು | : | **ಶ್ರೀ ಚಂದ್ರಶೇಖರ ರೆಡ್ಡಿ**<br>ಗೌರವಾನ್ವಿತ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೀದರ |
| ಅಧ್ಯಕ್ಷರು | : | **ಡಾ॥ ಬಸವರಾಜ ಜಿ. ಪಾಟೀಲ**<br>ಆಡಳಿತ ಮಂಡಳಿ ಸದಸ್ಯರು, ಹೈ.ಕ.ಶಿ. ಸಂಸ್ಥೆ ಕಲಬುರಗಿ |
| ಮುಖ್ಯ ಅತಿಥಿಗಳು | : | **ಶ್ರೀ ಆರ್. ರಾಘವೇಂದ್ರ**<br>ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯಕಾರ್ಯದರ್ಶಿಗಳು ಜಿಲ್ಲಾಕಾನೂನು ಸೇವೆಗಳ ಪ್ರಾಧಿಕಾರ ಬೀದರ |
| | : | **ಶ್ರೀ ಸಂತೋಷ ತರನಳ್ಳಿ** ವಕೀಲರು<br>ಪ್ರಧಾನ ಕಾರ್ಯದರ್ಶಿಗಳು ಜಿಲ್ಲಾ ವಕೀಲರ ಸಂಘ, ಬೀದರ |
| | : | **ಶ್ರೀ ಧನರಾಜ ಬಿರಾದಾರ**<br>ವಕೀಲರು, ಬೀದರ |
| | : | **ಶ್ರಿ ಬಿ.ಎಸ್. ಪಾಟೀಲ** ವಕೀಲರು<br>ಮತ್ತು ಸದಸ್ಯರು ಕುಟುಂಬ ಕಲ್ಯಾಣ ಸಮಿತಿ, ಬೀದರ |
| ಸಂಯೋಜಕರು | : | **ಶ್ರೀ ದಾನಿ ಬಾಬುರಾವ**<br>ಕಾರ್ಯದರ್ಶಿಗಳು ಜಿಲ್ಲಾ ವಿಜ್ಞಾನ ಸಮಿತಿ, ಬೀದರ |

## ತಮ್ಮಗೇ ಆದರದ ಸ್ವಾಗತ

ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ ಬೀದರ
ಜಿಲ್ಲಾ ವಿಜ್ಞಾನ ಸಮಿತಿ, ಜಿಲ್ಲಾ ವಕೀಲರ ಸಂಘ ಬೀದರ

CamScanner

# ಬಸವೇಶ್ವರ ಬಿ.ಎಡ್. ಮಹಾವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆ



ಬೀದರ, ಸಪ್ಟೆಂಬರ್. 05: ಶಿಕ್ಷಕ ಸಮಾಜದ ನಿರ್ಮಾಪಕ. ಗುರು–ಶಿಷ್ಯರ ಪರಂಪರೆಯ ವೈಶಿಷ್ಟತೆ ಹಾಗೂ ಗುರು–ಶಿಷ್ಯರ ನಡುವಿನ ಭಾವನಾತ್ಮಕ ಸಂಬಂಧವನ್ನು ಉದಾಹರಣೆಯ ಮೂಲಕ ವಿದ್ಯಾರ್ಥಿಗಳ ಮನಮುಟ್ಟುವಂತೆ ಅಶೋಕ ಡೊಂಗ್ರೆ ಅವರು ಹೇಳಿದರು.

ಅವರು ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯಡಿಯಲ್ಲಿ ನಡೆಯುತ್ತಿರುವ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತ, ಶಿಕ್ಷಕರ ವ್ಯಕ್ತಿತ್ವ, ಗುಣ, ಸಾಮಾರ್ಥ್ಯ ಕುರಿತು ಮಾರ್ಮಿಕವಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಬಸವೇಶ್ವರ ಬಿ.ಎಡ್. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಮಲ್ಲಿಕಾರ್ಜುನ ಕನಕಟ್ಟೆಯವರು ಮಾತನಾಡುತ್ತ, ರಾಮಕೃಷ್ಣ ಪರಂಹಂಸರ ಹಾಗೂ ಸ್ವಾಮಿ ವಿವೇಕಾನಂದರ ಗುರು–ಶಿಷ್ಯ ಪರಂಪರೆಯ ಹಿನ್ನಲೆ ಕುರಿತು ಗುರುಗಳಲ್ಲಿರುವ ಶ್ರೇಷ್ಠ ಗುಣಗಳನ್ನು ವಿದ್ಯಾರ್ಥಿಗಳು ಅನುಸರಿಸಬೇಕು ಎಂದರು.

ಬುದ್ಧ, ಬಸವ, ಅಂಬೇಡ್ಕರರ ಹೇಳಿಕೊಟ್ಟ ಅಹಿಂಸೆ, ಸಮಾನತೆ, ಸತ್ಯ ಶಾಂತಿಯ ಬೋಧನೆಯನ್ನು ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ವಿದ್ಯಾರ್ಥಿಗಳ ಮನಪರಿವರ್ತನೆ ಮಾಡುವಲ್ಲಿ ಗುರುಗಳ ಪಾತ್ರ ಮಹತ್ತರವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಕರು ಕಾರ್ಯಪ್ರವೃತ್ತರಾಗಬೇಕು ಎಂದು ಕರೆ ನೀಡಿದರು.

ವಿದ್ಯಾರ್ಥಿನಿ ಗೌರಮ್ಮ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಂಕುಶ ಸ್ವಾಗತಿಸಿದರು. ಉಮಾಕಾಂತರೆಡ್ಡಿ, ಅರ್ಚನಾ ನಿರೂಪಿಸಿದರು. ಶ್ರೀದೇವಿ ವಂದಿಸಿದರು.

ಈ ಕಾರ್ಯಕ್ರಮದಲ್ಲಿ ಬಸವೇಶ್ವರ ಮಹಾವಿದ್ಯಾಲಯದ ಉಪನ್ಯಾಸಕ ವೃಂದದವರಾದ ಡಾ. ಉಮಾಕಾಂತ ದೇವರಮನಿ, ರಾಜಕುಮಾರ ಶಿಂಧೆ, ವೀಣಾ ಎಸ್. ಜಲಾದೆ, ಶಿಲ್ಪಾ ಹಿಪ್ಪರಗಿ, ಧನರಾಜ ಭವರಾ, ವಿ.ಬಿ. ಚನ್ನಶೆಟ್ಟಿ ಸೇರಿದಂತೆ ಎಲ್ಲಾ ಸಿಬ್ಬಂದಿಗಳು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

CamScanner

# ಬಸವೇಶ್ವರ ಬಿ.ಎಡ್. ಮಹಾ ವಿದ್ಯಾಲಯದಲ್ಲಿ ಶಿಕ್ಷಕರ ದಿನಾಚರಣೆ



ಬೀದರ, ಸ. 05:

ಶಿಕ್ಷಕ ಸಮಾಜದ ನಿರ್ಮಾಪಕ. ಗುರು-ಶಿಷ್ಯರ ಪರಂಪರೆಯ ವೈಶಿಷ್ಟ್ಯತೆ ಹಾಗೂ ಗುರು-ಶಿಷ್ಯರ ನಡುವಿನ ಭಾವನಾತ್ಮಕ ಸಂಬಂಧವನ್ನು ಉದಾಹರಣೆಯ ಮೂಲಕ ವಿದ್ಯಾರ್ಥಿಗಳ ಮನಮುಟ್ಟುವಂತೆ ಅಶೋಕ ಡೊಂಗ್ರೆ ಅವರು ಹೇಳಿದರು. ಅವರು ಹೈದ್ರಾಬಾದ ಕರ್ನಾಟಕ ಶಿಕ್ಷಣ ಸಂಸ್ಥೆಯಡಿಯಲ್ಲಿ ನಡೆಯುತ್ತಿರುವ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತ, ಶಿಕ್ಷಕರ ವ್ಯಕ್ತಿತ್ವ, ಗುಣ, ಸಾಮಾರ್ಥ್ಯ ಕುರಿತು ಮಾರ್ಮಿಕವಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಬಸವೇಶ್ವರ ಬಿ.ಎಡ್. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಮಲ್ಲಿಕಾರ್ಜುನ ಕನಕಟ್ಟೆಯವರು ಮಾತನಾಡುತ್ತ, ರಾಮಕೃಷ್ಣ ಪರಂಹಂಸರ ಹಾಗೂ ಸ್ವಾಮಿ ವಿವೇಕಾನಂದರ ಗುರು-ಶಿಷ್ಯ ಪರಂಪರೆಯ ಹಿನ್ನಲೆ ಕುರಿತು ಗುರುಗಳಲ್ಲಿರುವ ಶ್ರೇಷ್ಠ ಗುಣಗಳನ್ನು ವಿದ್ಯಾರ್ಥಿಗಳು ಅನುಸರಿಸಬೇಕು ಎಂದರು. ಬುದ್ಧ, ಬಸವ, ಅಂಬೇಡ್ಕರರ ಹೇಳಿಕೊಟ್ಟ ಅಹಿಂಸೆ, ಸಮಾನತೆ, ಸತ್ಯ ಶಾಂತಿಯ ಬೋಧನೆಯನ್ನು ವಿದ್ಯಾರ್ಥಿಗಳು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳ ಮನಪರಿವರ್ತನೆ ಮಾಡುವಲ್ಲಿ ಗುರುಗಳ ಪಾತ್ರ ಮಹತ್ತರವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಕರು ಕಾರ್ಯಪ್ರವೃತ್ತರಾಗಬೇಕು ಎಂದು ಕರೆ ನೀಡಿದರು.

ವಿದ್ಯಾರ್ಥಿನಿ ಗೌರಮ್ಮ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಂಕುಶ ಸ್ವಾಗತಿಸಿದರು. ಉಮಾಕಾಂತರೆಡ್ಡಿ, ಅರ್ಚನಾ ನಿರೂಪಿಸಿದರು. ಶ್ರೀದೇವಿ ವಂದಿಸಿದರು.

ಈ ಕಾರ್ಯಕ್ರಮದಲ್ಲಿ ಬಸವೇಶ್ವರ ಮಹಾವಿದ್ಯಾಲಯದ ಉಪನ್ಯಾಸಕ ವೃಂದದವರಾದ ಡಾ. ಉಮಾ ಕಾಂತ ದೇವರಮನಿ, ರಾಜಕುಮಾರ ಶಿಂಧೆ, ವೀಣಾ ಎಸ್. ಜಲಾದೆ, ಶಿಲ್ಪಾ ಹಿಪ್ಪರಗಿ, ಧನರಾಜ ಭವರಾ, ವಿ.ಬಿ. ಚನ್ನಶೆಟ್ಟಿ ಸೇರಿದಂತೆ ಎಲ್ಲಾ ಸಿಬ್ಬಂದಿಗಳು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

****

CamScanner

**Vijaya Karnataka**
**Daily News Paper**
**Dated : 10-12-2023**

# ಬಿಇಡಿ ಫಲಿತಾಂಶ; ಪ್ರತಿಶತ ದಾಖಲು

**ಬೀದರ್:** ನಗರದ ಹೈ.ಕ.ಶಿ. ಸಂಸ್ಥೆಯ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ, (ಬಿಇಡಿ) ಬೀದರ್‌ನ ಕಳೆದ ಜುಲೈ-ಆಗಸ್ಟ್‌ನಲ್ಲಿ ನಡೆದ ಗುಲ್ಬರ್ಗ ವಿಶ್ವವಿದ್ಯಾಲಯ ಕಲಬುರಗಿಯ ಬಿಇಡಿ. ಪ್ರಥಮ ಹಾಗೂ ತೃತೀಯ ಸೆಮಿಸ್ಟರ್ ಪರೀಕ್ಷೆಯಲ್ಲಿ ಮಹಾವಿದ್ಯಾಲಯಕ್ಕೆ ನೂರಕ್ಕೆ ನೂರು ಪ್ರತಿಶತ ಫಲಿತಾಂಶ ಬಂದಿದೆ. ತೃತೀಯ ಸೆಮಿಸ್ಟರ್‌ನಲ್ಲಿ ಪ್ರಶಿಕ್ಷಣಾರ್ಥಿಗಳಾದ ಸ್ನೇಹಾ ಕಲ್ಯಾಣರಾವ (89.2%) ಪ್ರಥಮ ಸ್ಥಾನ, ವೈಷ್ಣವಿ ಚಂದ್ರಕಾಂತ ಬುಕ್ಕಾ (88.8%) ದ್ವಿತೀಯ ಸ್ಥಾನ ಹಾಗೂ ಶ್ರೀಧರ ನಿಂಗಪ್ಪ ಅಲ್ಯಾಳ (87.2%) ತೃತೀಯ ಸ್ಥಾನ ಪಡೆದಿದ್ದಾರೆ. ಪ್ರಥಮ ಸೆಮಿಸ್ಟರ್‌ನಲ್ಲಿ ಪ್ರಶಿಕ್ಷಣಾರ್ಥಿಗಳಾದ ವಿಷ್ಣು ಅಶೋಕ, ವಾಣಿ ರವಿ ಹಾಗೂ ಅಮರ ಹಣಮಂಡಲು (88.7%) ಪ್ರಥಮ ಸ್ಥಾನ, ರಶ್ಮಿ ರಾಜೇಂದ್ರ, ವಿಶಾಲ ಶ್ರೀಮಂತ ಹಾಗೂ ನಿಖಿಲ್ ಅಶೋಕ (88.2%) ದ್ವಿತೀಯ ಸ್ಥಾನ, ರೋಹಿತ್ ರಾಜಕುಮಾರ ಮತ್ತು ಶಿವಾನಿ ಸಿದ್ರಾಮ ಮುಗಟೆ (87.3%) ತೃತೀಯ ಸ್ಥಾನ ಪಡೆದಿದ್ದಾರೆ. ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳ ಸಾಧನೆಗೆ ಹೈಕಶಿಸಂ ಅಧ್ಯಕ್ಷ ಡಾ. ಭೀಮಾಶಂಕರ ಬಿಲಗುಂದಿ, ಆಡಳಿತ ಮಂಡಳಿಯ ಸದಸ್ಯ ಡಾ. ರಜನೀಶ ವಾಲಿ, ಕಾಲೇಜಿನ ಪ್ರಾಂಶುಪಾಲ ಡಾ. ಮಲ್ಲಿಕಾರ್ಜುನ ಚ. ಕನಕಟ್ಟೆ ಹಾಗೂ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

**SanjeVani Bidar Edition.**
**Daily News Paper**
**Dated : 09-12-2023**

# ಬಸವೇಶ್ವರ ಬಿಇಡಿ ಕಾಲೇಜಗೆ ಶತ ಪ್ರತಿಶತ ಫಲಿತಾಂಶ



ಬೀದರ:ಡಿ.9:ಕಳೆದ ಜುಲೈ-ಆಗಸ್ಟನಲ್ಲಿ ನಡೆದ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿಯ ಬಿ.ಇಡಿ. ಪ್ರಥಮ ಹಾಗೂ ತೃತೀಯ ಸೆಮಿಸ್ಟರ್ ಪರೀಕ್ಷೆಯಲ್ಲಿ ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಡಿ ನಡೆಯುತ್ತಿರುವ ಬಸವೇಶ್ವರ ಬಿಇಡಿ ಮಹಾವಿದ್ಯಾಲಯಕ್ಕೆ ನೂರಕ್ಕೆ ನೂರು ಪ್ರತಿಶತ ಫಲಿತಾಂಶ ಬಂದಿದೆ.

ತೃತೀಯ ಸೆಮಿಸ್ಟರ್‌ನಲ್ಲಿ ಪ್ರಶಿಕ್ಷಣಾರ್ಥಿಗಳಾದ ಸ್ನೇಹಾ ಕಲ್ಯಾಣರಾವ (89.2%) ಪ್ರಥಮ ಸ್ಥಾನ, ವೈಷ್ಣವಿ ಚಂದ್ರಕಾಂತ ಬುಕ್ಕಾ (88.8%) ದ್ವಿತೀಯ ಸ್ಥಾನ ಹಾಗೂ ಶ್ರೀಧರ ನಿಂಗಪ್ಪಾ ಅಲ್ಯಾಳ (87.2%) ತೃತೀಯ ಸ್ಥಾನ ಪಡೆದಿದ್ದಾರೆ. ಪ್ರಥಮ ಸೆಮಿಸ್ಟರ್‌ನಲ್ಲಿ ಪ್ರಶಿಕ್ಷಣಾರ್ಥಿಗಳಾದ ವಿಷ್ಣು ಅಶೋಕ, ವಾಣಿ ರವಿ ಹಾಗೂ ಅಮರ ಹಣಮಂಡಲು (88.7%) ಪ್ರಥಮ ಸ್ಥಾನ, ರಶ್ಮೀ ರಾಜೇಂದ್ರ, ವಿಶಾಲ ಶ್ರೀಮಂತ ಹಾಗೂ ನಿಖೀಲ್ ಅಶೋಕ (88.2%) ದ್ವಿತೀಯ ಸ್ಥಾನ, ರೋಹಿತ್ ರಾಜಕುಮಾರ ಮತ್ತು ಶಿವಾನಿ ಸಿದ್ರಾಮ ಮುಗಟೆ (87.3%) ತೃತೀಯ ಸ್ಥಾನ ಪಡೆದಿದ್ದಾರೆ.

ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳ ಸಾಧನೆಗೆ ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಭೀಮಾಶಂಕರ ಬಿಲಗುಂದಿ, ಆಡಳಿತ ಮಂಡಳಿಯ ಸದಸ್ಯರು ಹಾಗೂ ಬಿ.ವಿ.ಬಿ. ಕಾಲೇಜು ಆವರಣ ಸಂಸ್ಥೆಗಳ ಸುಧಾರಣಾ ಸಮಿತಿಯ ಸಂಚಾಲಕರಾದ ಡಾ. ರಜನೀಶ ವಾಲಿ ಮತ್ತು ಕಾಲೇಜಿನ ಪ್ರಾಂಶುಪಾಲರಾದ ಡಾ. ಮಲ್ಲಿಕಾರ್ಜುನ ಚ. ಕನಕಟ್ಟೆ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

**Karunada Kanda Daily News Paper Bidar Edition.**
**Dated : 09-12-2023**

karunadakanda.com/2023/12/09/news-1203/

ಮುಖಪುಟ | ಸ್ಥಳೀಯ ಸುದ್ದಿ | ರಾಜ್ಯ | ರಾಜಕೀಯ | ದೇಶ-ವಿದೇಶ | ಕ್ರೀಡೆ | ಸಂಪಾದಕೀಯ | ಕರುನಾಡ ಕಂದ | ಸಾಹಿತ್ಯ | ಇ-ಪತ್ರಿಕೆ | ನಮ್ಮ ಬಗ್ಗೆ/ಕರುನಾಡ ಕಂದ

# ಹೈ.ಕ.ಶಿ.ಸಂಸ್ಥೆಯಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ,(ಬಿ.ಇಡಿ) ಬೀದರ.ಉತ್ತಮ ಫಲಿತಾಂಶ

By Karunada Kanda | December 9, 2023 | 3:39 pm | No Comments




ಬೀದರ್:ನಗರದ ಹೈ.ಕ.ಶಿ. ಸಂಸ್ಥೆಯ ಬಸವೇಶ್ವರ ಶಿಕ್ಷಣ ಮಹಾವಿದ್ಯಾಲಯ,(ಬಿ.ಇಡಿ) ಬೀದರನ ಕಳೆದ ಜುಲೈ-ಆಗಸ್ಟ್ ನಲ್ಲಿ ನಡೆದ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿಯ ಬಿ.ಇಡಿ. ಪ್ರಥಮ ಹಾಗೂ ತೃತೀಯ ಸೆಮಿಸ್ಟರ್ ಪರೀಕ್ಷೆಯಲ್ಲಿ ಮಹಾವಿದ್ಯಾಲಯಕ್ಕೆ ನೂರಕ್ಕೆ ನೂರು ಪ್ರತಿಶತ ಫಲಿತಾಂಶ ಬಂದಿದೆ.ತೃತೀಯ ಸೆಮಿಸ್ಟರ್‌ನಲ್ಲಿ ಪ್ರಶಿಕ್ಷಣಾರ್ಥಿಗಳಾದ ಸ್ನೇಹಾ ಕಲ್ಯಾಣರಾವ (89.2%) ಪ್ರಥಮ ಸ್ಥಾನ,ವೈಷ್ಣವಿ ಚಂದ್ರಕಾಂತ ಬುಕ್ಕಾ (88.8%)ದ್ವಿತೀಯ ಸ್ಥಾನ ಹಾಗೂ ಶ್ರೀಧರ ನಿಂಗಪ್ಪಾ ಅಲ್ಯಾಳ (87.2%)ತೃತೀಯ ಸ್ಥಾನ ಪಡೆದಿದ್ದಾರೆ.ಪ್ರಥಮ ಸೆಮಿಸ್ಟರ್‌ನಲ್ಲಿ ಪ್ರಶಿಕ್ಷಣಾರ್ಥಿಗಳಾದ ವಿಷ್ಣು ಅಶೋಕ,ವಾಣಿ ರವಿ ಹಾಗೂ ಅಮರ ಹಣಮಂಡಲು (88.7%) ಪ್ರಥಮ ಸ್ಥಾನ,ರಶ್ಮೀ ರಾಜೇಂದ್ರ,ವಿಶಾಲ ಶ್ರೀಮಂತ ಹಾಗೂ ನಿಖೀಲ್ ಅಶೋಕ (88.2%) ದ್ವಿತೀಯ ಸ್ಥಾನ, ರೋಹಿತ್ ರಾಜಕುಮಾರ ಮತ್ತು ಶಿವಾನಿ ಸಿದ್ರಾಮ ಮುಗಟೆ (87.3%) ತೃತೀಯ ಸ್ಥಾನ ಪಡೆದಿದ್ದಾರೆ.ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳ ಸಾಧನೆಗೆ ಹೈದ್ರಾಬಾದ್ ಕರ್ನಾಟಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ. ಭೀಮಾಶಂಕರ ಬಿಲಗುಂದಿ,ಆಡಳಿತ ಮಂಡಳಿಯ ಸದಸ್ಯರು ಹಾಗೂ ಬಿ.ವಿ.ಬಿ. ಕಾಲೇಜು ಆವರಣ ಸಂಸ್ಥೆಗಳ ಸುಧಾರಣಾ ಸಮಿತಿಯ ಸಂಚಾಲಕರಾದ ಡಾ.ರಜನೀಶ ವಾಲಿ ಮತ್ತು ಕಾಲೇಜಿನ ಪ್ರಾಂಶುಪಾಲರಾದ ಡಾ.ಮಲ್ಲಿಕಾರ್ಜುನ ಚ.ಕನಕಟ್ಟೆ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳಿಗೆ ಅಭಿನಂದನೆಯನ್ನು ಸಲ್ಲಿಸಿ ಹರ್ಷ ವ್ಯಕ್ತಪಡಿಸಿದ್ದಾರೆ.

ವರದಿ:ಸಾಗರ ಪಡಸಲೆ

# Sanje Vani Daily News Paper Bidar Edition.
# Dated : 04-01-2024

## Savitribai Phule Jayanti

### ಮನುಷ್ಯರನ್ನು ಮನುಷ್ಯರಂತೆ ಕಾಣುವುದೇ ನಿಜವಾದ ಸಮಾನತೆ: ಶಂಭುಲಿಂಗ ವಾಲ್ದೊಡ್ಡಿ



ಬೀದರ:ಜ.4:ಪ್ರಾಚೀನ ಕಾಲದಿಂದಲೂ ನಮ್ಮ ದೇಶದ ಸಮಾಜದಲ್ಲಿ ಬೇರೂರಿದ್ದ ಅನಿಷ್ಟ ಪದ್ಧತಿಗಳಾದ, ಜಾತಿವ್ಯವಸ್ಥೆ, ಶೋಷಣೆ,ದಬ್ಬಾಳಿಕೆ,ತಾರತಮ್ಯ,ಸ್ತ್ರೀ ಅಸಮಾನತೆಯಿಂದ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದರು. ಇದರಿಂದ ಸಮಾಜದಲ್ಲಿ ಅಶಾಂತಿ, ಅಸಮಾಧಾನ ಮತ್ತು ಅಸಮಾನತೆ ಬೇರೂರಿತ್ತು ಎಂದು ನುಡಿದರು.

ಅಕ್ಷರದವ್ವ, ಭಾರತದ ಮೊದಲ ಮಹಿಳಾ ಶಿಕ್ಷಕಿ ಶ್ರೀಮತಿ ಸಾವಿತ್ರಿಬಾಯಿ ಫುಲೆಯವರ ಜನ್ಮ ದಿನಚಾರಣೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿರುವ ಶ್ರೀ ಶಂಭುಲಿಂಗ ವಾಲ್ದೊಡ್ಡಿ ಅವರು ಮಾತನಾಡುತ್ತಾ ಸಾಮಾಜಿಕ ಅಸಮಾನತೆಯ ಕುರಿತು ಭಾರತದ ಪ್ರಾಚೀನ ಸಾಮಾಜಿಕ ವ್ಯವಸ್ಥೆಯ ಸುಧಾರಣೆ ನಿಟ್ಟಿನಲ್ಲಿ ಗೌತಮಬುದ್ಧರಿಂದ ಪ್ರಾರಂಭವಾದ ಪ್ರಯತ್ನ ಸ್ವಾತಂತ್ರ್ಯ ನಂತರದ ಅವಧಿಯವರೆಗೆ ನಿರಂತರವಾಗಿ ನಡೆಯುತ್ತಾ ನಡೆದ ಪ್ರಯತ್ನ ಇಂದಿನ ಈ ಆಧುನಿಕ ಸಮಾಜ ನಿರ್ಮಾಣಕ್ಕೆ ನಾಂದಿಯಾಗಿದೆ.

ಭಾರತದ ಮಹಿಳಾ ಸ್ಥಿತಿಗತಿಯ ಸುಧಾರಣೆಯಲ್ಲಿ ಸ್ತ್ರೀ ಶಿಕ್ಷಣದ ಮಹತ್ವ ಅರಿತು ಕಾರ್ಯರೂಪಕ್ಕೆ ತಂದರು. ಸಾವಿತ್ರಿಬಾಯಿ ಫುಲೆ ಅವರ ವ್ಯಕ್ತಿತ್ವ ನಿರ್ಮಾಣ,ಶಿಕ್ಷಣದ ಬೆಳವಣಿಗೆಗಾಗಿ ಜ್ಯೋತಿಭಾ ಫುಲೆಯವರು ವಿಶೇಷ ಪ್ರೇರಣೆಯನ್ನು ನೀಡಿ,ಒಬ್ಬ ಶಿಕ್ಷಕಿ-ಯಾಗಿ ನಿರ್ಮಾಣ ಮಾಡಿದರು. ಜೊತೆಗೆ ಸಮಾಜದ ಎಲ್ಲಾ ವರ್ಗದ ಮಹಿಳೆರಿಗಾಗಿ ಶಾಲೆ ಪ್ರಾರಂಭಿಸಿ ಶಿಕ್ಷಣ ನೀಡಲು ಕೈ ಜೋಡಿಸಿದರು. ಈ ಪ್ರಯತ್ನಕ್ಕೆ ಸಾವಿತ್ರಿಬಾಯಿ ಫುಲೆಯವರಿಗೆ ರಾಷ್ಟ್ರದ ಮೊದಲ ಶಿಕ್ಷಕಿ ಎಂಬ ಬಿರುದನ್ನು ಪಡೆದರು. ಸಮಾಜದ ಅನಿಷ್ಟ ಪದ್ಧತಿಗಳಾದ ಬಾಲ್ಯವಿವಾಹ, ಸತಿಸಹಗಮ ಪದ್ಧತಿಗಳ ನಿರ್ಮೂಲನೆಗಾಗಿ ತಮ್ಮ ಜೀವಿತದ ಕೊನೆಯ ಅವಧಿಯವರೆಗೂ ನಿರಂತರವಾಗಿ ಶ್ರಮಿಸಿದರು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಡಾ. ಮಲ್ಲಿಕಾರ್ಜುನ ಚ. ಕನಕಟ್ಟೆ ಅವರು ಮಾತನಾಡಿ, ಸಾವಿತ್ರಿಬಾಯಿ ಫುಲೆಯವರು ಒಬ್ಬ ಛಲಗಾರ್ತಿಯಾಗಿ, ಹೋರಾಟಗಾರ್ತಿಯಾಗಿ, ಸಮಾಜಸುಧಾರಕರಾಗಿ ದೇಶದಲ್ಲಿ ಹೆಣ್ಣುಮಕ್ಕಳ ಸಮಾನ ಶಿಕ್ಷಣಕ್ಕಾಗಿ ಶ್ರಮಿಸಿದ ಏಕೈಕ ಮಹಿಳೆ. ಇದಕ್ಕೆ ಪ್ರತಿಯಾಗಿ ಇಂದಿನ ಸಮಾಜದಲ್ಲಿ ಪ್ರತಿಯೊಂದು ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರವು ಹೆಚ್ಚಳವಾಗಿದೆ.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಶ್ರೀಮತಿ ಶಿಲ್ಪಾ ಹಿಪ್ಪರಗಿ, ಶ್ರೀಮತಿ ವೀಣಾ ಎಸ್. ಜಲಾದೆ,ಡಾ. ಸಂತೋಷಕುಮಾರ ಸಜ್ಜನ, ರಾಜಕುಮಾರ ಶಿಂಧೆ, ಪಾಂಡುರಂಗ ಕುಂಬಾರ ಉಪಸ್ಥಿತರಿದ್ದರು. ವೈಷ್ಣವಿ ನಿರೂಪಿಸಿದರು,ಕಾವೇರಿ ಸ್ವಾಗತಿಸಿದರು, ಪ್ರಿಯಾಂಕ ವಂದಿಸಿದರು.